ಹನಿ

# ಕಮಲ್ ಪಾಲಿಟಿಕ್ಸ್?

ತಮಿಳುನಾಡಿನ ರಾಜಕೀಯ ಬಿಸಿಯೇರತೊಡಗಿದೆ. ರಜನಿಕಾಂತ್ ಬೆನ್ನಲ್ಲೇ ಈಗ ಕಮಲಹಾಸನ್ ಕೂಡಾ ರಾಜಕೀಯಕ್ಕೆ ಇಳಿಯುತ್ತಾರೆ ಎಂಬ ಗುಲ್ಲೆದ್ದಿದೆ. ಕಳೆದ ಕೆಲವು ವಾರಗಳಿಂದ ಕಮಲಹಾಸನ್ ತಮಿಳುನಾಡಿನ ಅಧಿಕಾರಸ್ಥರ ಮೇಲೆ ಟ್ವಿಟ್ಟರ್ ದಾಳಿ ನಡೆಸುತ್ತಿದ್ದಾರೆ. 'ಭ್ರಷ್ಟಾಚಾರ ಮುಗಿಲುಮುಟ್ಟಿದೆ. ಜನ ಒಗ್ಗಟ್ಟಾಗಿ ಭ್ರಷ್ಟ ಸರಕಾರವನ್ನು ಅಧಿಕಾರದಿಂದ ಇಳಿಸಲು ಹೋರಾಡಬೇಕು, ನಾನಂತೂ ರೆಡಿ' ಎಂದಿದ್ದಾರೆ. ಇದಕ್ಕೆ ಪ್ರತಿಯಾಗಿ ಕಮಲಹಾಸನ್ ವಿರುದ್ಧ ಅಲ್ಲಿನ ಹಲವು ಮಂತ್ರಿಗಳು ಪ್ರತಿದಾಳಿ ನಡೆಸಿದ್ದಾರೆ. ಕಮಲ್ ಹೆದರಿಲ್ಲ. 'ಉತ್ತರಪ್ರದೇಶದಲ್ಲಿ ಮಕ್ಕಳ ಸಾವಿನ ದುರಂತ ಮತ್ತು ಭ್ರಷ್ಟಾಚಾರದ ಕಾರಣಕ್ಕೆ ಅಲ್ಲಿನ ಸಿಎಂ ರಾಜೀನಾಮೆ ಕೊಡಬೇಕು ಎಂದಾದರೆ, ಭ್ರಷ್ಟಾಚಾರಕ್ಕಾಗಿ ಮೊದಲು ತಮಿಳುನಾಡಿನ ಮುಖ್ಯಮಂತ್ರಿಯ ರಾಜೀನಾಮೆ ಏಕೆ ಕೇಳುತ್ತಿಲ್ಲ?' ಎಂದು ಮತ್ತೊಂದು ಟ್ವೀಟ್ ಒಗೆದಿದ್ದಾರೆ.

ರಜನಿಕಾಂತ್ 'ರಾಜಕೀಯಕ್ಕೆ ಪ್ರವೇಶಿಸುತ್ತೇನೆ' ಎಂದು ಹೇಳಲು ಆರಂಭಿಸಿ ಹಲವು ವರ್ಷಗಳೇ ಉರುಳಿವೆ. ಆದರೆ ಕಮಲಹಾಸನ್ ಹೀಗೆ ನೇರ ರಾಜಕೀಯ ಸೇರುವ ಮಾತನಾಡಿದವರಲ್ಲ. ಅವರದ್ದೇನಿದ್ದರೂ ವಿಷಯಕ್ಕೆ ಸಂಬಂಧಿಸಿ ಪಾಂಡಿತ್ಯಪೂರ್ಣ ಪ್ರತಿಕ್ರಿಯೆಗಳು ಇರುತ್ತಿದ್ದವು. ಆದರೆ ಈಗ ರಾಜ್ಯದ ಅಣ್ಣಾಡಿಎಂಕೆ ಸರ್ಕಾರದ ವಿರುದ್ಧ ಕಮಲಹಾಸನ್ ನೇರ ಯುದ್ಧ ಸಾರಿದ್ದಾರೆ. ಪ್ರತಿದಿನ ಎಂಬಂತೆ ಟ್ವೀಟ್ ಮಾಡುತ್ತಿದ್ದಾರೆ. ಅಣ್ಣಾಡಿಎಂಕೆ ಸಚಿವರು 'ಧೈರ್ಯ ಇದ್ದರೆ ರಾಜಕೀಯಕ್ಕೆ ಇಳಿಯಿರಿ' ಎಂದು ಸವಾಲು ಹಾಕಿದ್ದಾರೆ. 'ನಾನು ಮೊದಲ ಬಾರಿಗೆ ವೋಟ್ ಹಾಕಿದಾಗಲೇ ರಾಜಕೀಯಕ್ಕೆ ಇಳಿದಂತೆ' ಎಂದಿರುವ ಕಮಲಹಾಸನ್, 'If I decide, I am CM/ Leader' ಎಂದು ಟ್ವೀಟ್ ಮಾಡಿದ್ದು ತಮಿಳುನಾಡು ರಾಜಕೀಯದ ಮೇಲೆ ಹೊಸ ಬಾಂಬ್ ಹಾಕಿದಂತಾಗಿದೆ. ಕಮಲ ಪಕ್ಷದ ನಾಯಕರೂ ಕಮಲಹಾಸನ್‌ರನ್ನು ಟೀಕಿಸುತ್ತಿದ್ದಾರೆ. ಏಕೆಂದರೆ ಅವರೀಗ ಅಣ್ಣಾಡಿಎಂಕೆ ಜತೆಗೂಡಿ ಹೊಸ ರಾಜಕೀಯ ಸಮೀಕರಣ ಆರಂಭಿಸುವ ಸಿದ್ಧತೆಯಲ್ಲಿದ್ದಾರೆ. ರಾಜಕೀಯಕ್ಕೆ ಇಳಿಯುವುದೇ ಆದರೆ ಕಮಲ್ ಯಾವ ಪಕ್ಷ ಸೇರಿಕೊಳ್ಳಬಹುದು .. ಎನ್ನುವುದೀಗ ಕುತೂಹಲ ಕೆರಳಿಸಿರುವ ಪ್ರಶ್ನೆ. ರಜನಿಕಾಂತ್ ಮೊದಲಿನಿಂದ ಆಧ್ಯಾತ್ಮದ ಬಗ್ಗೆ ಮಾತನಾಡುತ್ತಿದ್ದವರು. ಅವರ ಇತ್ತೀಚಿನ ನಡೆಗಳನ್ನು ನೋಡಿದರೆ ಪ್ರತ್ಯೇಕ ಪಕ್ಷ ಸ್ಥಾಪಿಸಿ, ಬಿಜೆಪಿಯ ಜತೆಗೆ ಹೊಂದಾಣಿಕೆ ಮಾಡಿಕೊಳ್ಳುವಂತೆ ಕಾಣಿಸುತ್ತಿದೆ. ಆದರೆ ಕಮಲ್ ಮೊದಲಿನಿಂದಲೂ ನಾಸ್ತಿಕ. ಅದನ್ನು ಬಹಿರಂಗವಾಗಿಯೇ ಪ್ರಕಟಿಸಿದ್ದಾರೆ. ಹಾಗಾಗಿ ಅವರು ಡಿಎಂಕೆ ಪಕ್ಷದ ಜತೆಗೆ ಕೈ ಜೋಡಿಸಬಹುದೆ ಎನ್ನುವ ಅನುಮಾನ ಎಲ್ಲರದ್ದು. ಇತ್ತೀಚೆಗೆ ಡಿಎಂಕೆ ಪಕ್ಷದ ಸಭೆಯೊಂದರಲ್ಲೂ ಅವರು ಭಾಗವಹಿಸಿದ್ದಾರೆ. ಅಲ್ಲಿ ಸಿನಿಮಾ ಉದ್ಯಮದ ಸಮಸ್ಯೆಗಳ ಬಗ್ಗೆ ಮಾತನಾಡಿದರೂ. ಈ ಭಾಷಣಕ್ಕೆ ವಿಶೇಷ ಅರ್ಥಗಳು ಹೊಳೆಯತೊಡಗಿವೆ.



2015ರಲ್ಲಿ ಚೆನ್ನೈನಲ್ಲಿ ಭಾರೀ ನೆರೆ ಬಂದಾಗ ಒಮ್ಮೆ ಕಮಲಹಾಸನ್ ಸರ್ಕಾರದ ವಿರುದ್ಧ ಸಿಡಿದೆದ್ದಿದ್ದರು. ಕಳೆದ ವರ್ಷ ಜಲ್ಲಿಕಟ್ಟು ನಿಷೇಧದ ವಿವಾದ ಆದಾಗ ಕಮಲಹಾಸನ್ ಗಟ್ಟಿ ಧ್ವನಿಯಲ್ಲಿ ಮುಂಚೂಣಿಯಲ್ಲಿ ನಿಂತು ವಿರೋಧಿಸಿದ್ದರು. ಅದೇ ವೇಳೆ ಅವರ 'ವಿಶ್ವರೂಪಂ' ಚಿತ್ರವನ್ನು ಜಯಲಲಿತಾ ಸರ್ಕಾರ ನಿಷೇಧಿಸುವ ಮಾತನಾಡಿದಾಗ, ಕಮಲ್ ಸಿಟ್ಟಿಗೆದ್ದಿದ್ದರು. 'ನನ್ನ ಸಿನಿಮಾದ ತೆರಿಗೆ ವಿನಾಯ್ತಿಗೆ ಸರ್ಕಾರದ ಮಂತ್ರಿಗಳು ಲಂಚ ಕೇಳುತ್ತಿದ್ದಾರೆ' ಎಂದು ನೇರ ಆರೋಪ ಮಾಡಿದ್ದರು. ಇದೀಗ ವಿಜಯ್ ಟಿವಿ ಯಲ್ಲಿ 'ಬಿಗ್‌ಬಾಸ್' ಕಾರ್ಯಕ್ರಮದ ನಿರೂಪಕರಾಗಿ ವಾರಾಂತ್ಯದಲ್ಲಿ ಕಾಣಿಸಿಕೊಳ್ಳುತ್ತಿರುವ ಕಮಲಹಾಸನ್ ಅಲ್ಲಿಂದಲೇ ಭ್ರಷ್ಟಾಚಾರದ ವಿರುದ್ಧ ಗುಟುರು ಹಾಕಿರುವುದು ಹೊಸ ರಾಜಕೀಯ ಲೆಕ್ಕಾಚಾರಕ್ಕೆ ನಾಂದಿ ಹಾಡಿದಂತಿದೆ. ಕಮಲಹಾಸನ್ 'ಬಿಗ್ ಬಾಸ್'ನಲ್ಲಿ ಹೀಗೆ ಮನಬಿಚ್ಚಿ ಮಾತನಾಡಲು ಶುರುವಿಟ್ಟ ಬಳಿಕ ಆ ಕಾರ್ಯಕ್ರಮದ ಟಿಆರ್‌ಪಿ ಕೂಡಾ 5.2ರಿಂದ 7.1ಕ್ಕೆ ಏರಿಕೆಯಾಗಿದೆ. ಕಮಲಹಾಸನ್ ಮತ್ತು ರಜನಿಕಾಂತ್ ಇಬ್ಬರೂ ರಾಜಕೀಯಕ್ಕೆ ಪ್ರವೇಶಿಸಿ ವಿರುದ್ಧ ದಿಕ್ಕಿನಲ್ಲಿ ನಡೆದರೆ ಅಲ್ಲಿನ ರಾಜಕೀಯ ರಂಗೇರುವುದಂತೂ ನಿಶ್ಚಿತ.

ರಜನಿ– ಕಮಲ್ ಸಂಘರ್ಷ ಹೊಸದಲ್ಲ. ತಮಿಳು ಸಿನಿಮಾ ರಂಗದಲ್ಲಿ ಅದು 70ರ ದಶಕದಿಂದಲೂ ನಡೆದಿರುವ ಸಂಗತಿಯೇ. ಕಮಲಹಾಸನ್ ಆರಂಭದಲ್ಲಿ ಹಾಸ್ಯಮಯ ಪಾತ್ರದಿಂದ ಆರಂಭಿಸಿ ಹೀರೋ ಆದವರು. ಅತ್ಯುತ್ತಮ ಸಿನಿಮಾಗಳಲ್ಲಿ ನಟಿಸಿ ಗೆದ್ದವರು. ರಜನಿಕಾಂತ್ ಆರಂಭದಲ್ಲಿ ವಿಲ್ಲನ್ ಪಾತ್ರಗಳಿಂದ ಆರಂಭಿಸಿ, ಹೀರೋ ಆದರೂ 'ಆ್ಯಂಟಿಹೀರೊ' ಇಮೇಜ್ ಅಂಟಿಸಿಕೊಂಡವರು. ಶಂಕರ್ ನಿರ್ದೇಶನದ '2.0' ಚಿತ್ರದಲ್ಲಿ ('ಎಂಥಿರನ್' ಭಾಗ 2) ರಜನಿಯನ್ನು ಹೀರೋ ಮಾಡಿ ಕಮಲಹಾಸನ್‌ಗೆ ವಿಲ್ಲನ್ ಪಾತ್ರದ ಆಫರ್ ನೀಡಲಾಗಿತ್ತು. ಆದರೆ ವಿಲ್ಲನ್ ಪಾತ್ರ ವಹಿಸಲು ಕಮಲ್ ಒಪ್ಪಲಿಲ್ಲ. ಈಗ ಆ ಪಾತ್ರವನ್ನು ಹಿಂದಿಯ ಹೀರೋ ಅಕ್ಷಯ ಕುಮಾರ್ ನಿರ್ವಹಿಸಿದ್ದಾರೆ.

ರಾಜಕೀಯದಲ್ಲೀಗ ರಜನಿ ವಿರುದ್ಧ ಕಮಲ್ ಹೀರೋ ಆಗುತ್ತಾರೋ, ವಿಲ್ಲನ್ ಆಗುತ್ತಾರೋ? ತಮಿಳುನಾಡಿನಲ್ಲಿ ಅಣ್ಣಾಡಿಎಂಕೆ ದುರ್ಬಲವಾಗಿದೆ. ಡಿಎಂಕೆಯ ಕರುಣಾನಿಧಿ ಅವರಿಗೆ ತೀರಾ ವಯಸ್ಸಾಗಿದೆ. ಅವರ ಪಕ್ಷದಲ್ಲೂ ಆಂತರಿಕ ಕಲಹಗಳಿವೆ. ಹೊಸ ರಾಜಕೀಯ ಪಕ್ಷವೊಂದು ರಂಗ ಪ್ರವೇಶಿಸಲು ಇದು ಅತ್ಯಂತ ಸೂಕ್ತ ಕಾಲ. ಈ ಶೂನ್ಯದ ಲಾಭವನ್ನು ಕಮಲ್ ಪಡೆದುಕೊಳ್ಳಬಹುದೆ? ಹೊಸ ಪಕ್ಷವನ್ನು ಸ್ಥಾಪಿಸುವಷ್ಟು ರಾಜಕೀಯ ದೃಢತೆ ಅವರಲ್ಲಿದೆಯೆ? ಅಥವಾ ಬುದ್ಧಿಜೀವಿಯಂತೆ ರಾಜಕೀಯದ ಹೊರಗಿದ್ದುಕೊಂಡೇ ರಾಜಕಾರಣಿಗಳ ಮೇಲೆ ಟೀಕಾಸ್ತ್ರ ಪ್ರಯೋಗಿಸುತ್ತಿರಬಹುದೆ? ನೀರಿಗೆ ಇಳಿಯುತ್ತಾರೋ ಎನ್ನುವುದು ಅಸ್ಪಷ್ಟ. ಆದರೆ 'ನೀರು ಎಷ್ಟು ಆಳವಿದೆ' ಎನ್ನುವುದನ್ನು ಕಮಲ್ ಪರೀಕ್ಷಿಸುತ್ತಿರುವಂತೆ ಕಾಣುತ್ತಿದೆ.

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65